# ಜಯ ಮಂಗಳಂ - ಆನಂದತೀರ್ಥ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** Lyrics given without highlights are as per Ref. 1. And the lyrics given in yellow highlights are as per Ref. 2.
4. **Note:** Singer has followed lyrics as in Ref. 1.

| | |
|---|---|
| ರಾಗ: ಭೈರವಿ ತಾಳ: ಅಟ | ರಾಗ: ಭೈರವಿ ತಾಳ: ಅಟ |
| | |
| ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥ | ಜಯ ಮಂಗಳಂ ನಿತ್ಯ ಶುಭ ಮಂಗಳಂ |
| | |
| ಮಂಗಳವು ಆನಂದತೀರ್ಥ ಗುರುರಾಯರಿಗೆ | ಮಂಗಳಂ ಆನಂದತೀರ್ಥ ಗುರುರಾಯರಿಗೆ |
| ಮಂಗಳವು ಮಧುರ ವಾಕ್ಯ ಸುಭಾಷ್ಯಗೆ ॥ ಅಪ ॥ | ಮಂಗಳಂ ಮಧುರನುಡಿ ಸಂಭಾಷ್ಯಗೆ |
| | ಮಂಗಳಂ ಮೈಥಿಲಿಗೆ ಅಂಗುಲೀಯನಿತ್ತವಗೆ |
| | ಮಂಗಳಂ ಜಯ ವೀರ ಮಧ್ವಮುನಿಗೆ |
| | |
| ಅಂಜನೆಯ ಗರ್ಭ ಸಂಜಾತ ವಿಖ್ಯಾತನಿಗೆ | ಅಂಜನೆಯ ಗರ್ಭಸಂಜಾತ ವಿಖ್ಯಾತನಿಗೆ |
| ಸಂಜೀವಿನಿಯ ತಂದ ಹನುಮಂತಗೆ | ಸಂಜೀವನವ ತಂದ ಹನುಮಂತಗೆ |
| ಸಂಜೆಯಲಿ ಲಂಕಿಣಿಯನಂಜಿಸಿ ಪೊಕ್ಕ ಪ್ರ- | ಅಂಜದಂತ ಭಯಕರ ಕಪಿಗಳಿಗೆ ತೋರಿದಗೆ |
| ಭಂಜನನ ಕುವರ ಮಂಜುಳ ವಾಕ್ಯಗೆ ॥ 1 ॥ | ಕಂಜಾಕ್ಷ ರಾಮನ ಭಜಿಸುವವಗೆ |
| | |
| ದ್ವಾಪರದಿ ಕುಂತಿಯೊಳ್ ಪರ್ವತದಿ ಜನಿಸಿದಗೆ | ದ್ವಾಪರದಿ ಕುಂತಿಯ ಗರ್ಭದಲಿ ಜನಿಸುತಲಿ |
| ಪಾಪಿ ಜರಾಸಂಧನನು ಸೀಳ್ದವಗೆ | ಪಾಪಿ ದೈತ್ಯರನೆಲ್ಲ ಸೀಳಿದವಗೆ |
| ದ್ರೌಪತಿಯ ಸೌಗಂಧಿ ಕುಸುಮವನು ತಂದವಗೆ | ದ್ರೌಪದಿಗೆ ಸೌಗಂಧಿ ಕುಸುಮವನೆ ತಂದವಗೆ |
| ಶ್ರೀಪತಿಯ ದಾಸ ಶ್ರೀ ಭೀಮಸೇನನಿಗೆ ॥ 2 ॥ | ಶ್ರೀಪತಿಯ ದಾಸ ಭೀಮಸೇನನಿಗೆ |
| | |
| ಕಲಿಯುಗದಿ ಶಂಕರನ ದುರ್ಮತವ ತರೆದವಗೆ | ಕಲಿಯುಗದಿ ಶಂಕರನ ದುರ್ಮತವ ಮುರಿದವಗೆ |
| ಖಳ ಬೌದ್ಧ ಚಾರ್ವಾಕ ಮತವ ಗೆಲಿದವಗೆ | ಖಳ ಬೌದ್ಧ ಚಾರ್ವಾಕ ಮತ ಗೆಲಿದಗೆ |
| ಒಲಿದು ಸಚ್ಛಾಸ್ತ್ರವನು ಸಾಧುಗಳಿಗೊರೆದವಗೆ | ಒಲಿದು ಸಚ್ಛಾಸ್ತ್ರವನು ಸಾಧುಗಳಿಗೊರೆದವಗೆ |
| ಸುಲಭ ಪುರಂದರ ವಿಠಲನ ದಾಸಗೆ ॥ 3 ॥ | ಸುಲಭ ಪುರಂದರ ವಿಠಲನ ಮಂತ್ರಿಗೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಧುರ ವಾಕ್ಯ ಸುಭಾಷ್ಯಗೆ** = ಮಧುರ ಭಾಷೆಯಲ್ಲಿ ಭಾಷ್ಯ ಬರೆದವನಿಗೆ

**ಲಂಕಿಣಿ** = ಹನುಮಂತನು ಲಂಕಾಪಟ್ಟಣವನ್ನು ಪ್ರವೇಶಿಸುವಾಗ ಲಂಕೆಯ ಅಭಿಮಾನಿ ದೇವತೆಯಾದ ಲಂಕಿಣಿ ಅಥವಾ ಲಂಕೆ ಇವನನ್ನು ತಡೆದಳು. ಆಗ ಹನುಮಂತನು ಮುಷ್ಟಿಯಿಂದ ಅವಳನ್ನು ಹೊಡೆದು ಸೋಲಿಸಿ ಅವಳ ಸಹಾಯದಿಂದಲೇ ಲಂಕಾ ಪಟ್ಟಣವನ್ನು ಹೊಕ್ಕನು.

**ಪರ್ವತ** = ಶಾಟ ಶೃಂಗ ಪರ್ವತ

**ಶಂಕರ** = ಆದಿ ಶಂಕರಾಚಾರ್ಯರು. ಅದ್ವೈತ ಮತ ಸ್ಥಾಪಕರು

**ಚಾರ್ವಾಕ** = ಬೃಹಸ್ಪತಿಯ ಶಿಷ್ಯ. ನಾಸ್ತಿಕ ಮತದ ಪ್ರಚಾರಕ. ಪ್ರತ್ಯಕ್ಷ ಪ್ರಮಾಣವೊಂದನ್ನೇ ಇವನು ಪುರಸ್ಕರಿಸಿದ್ದಾನೆ.

**Classification:** Keerthane
**Ankita:** purandara vittala
**Location:** NA
**Category:** Hanuma Stuti, madhwacharya stuti, mangala song
**Sub-Category:** hanuma, rama, sita, shubha, mangala, sripati, hanuma-bhima-madhva, madhva, madhwacharya, kunti, kali yuga, sadhu, lanka, draupadi, parvata,
**Pravachana:** NA
**Explanation:** NA